Original Article
ISSN (Online): 2582-7472

ShodhKosh: Journal of Visual and Performing Arts
July 2024 5(7), 306-312

# ಬುಡಕಟ್ಟು ಸಾಹಿತ್ಯ ಸಂಶೋಧನೆ ಹೊಸ ಸಾಧ್ಯತೆಗಳು

## NEW POSSIBILITIES IN TRIBAL LITERARY RESEARCH

Dr. Palaiah P
Guest Lecturer, Department of Kannada, H.C.Boraiah Memorial SC/ST First Grade College, Jagalur.

**Corresponding Author**
Dr. Palaiah P

**DOI:** 10.29121/shodhkosh.v5.i7.2024.2594

**Funding:** This research received no specific grant from any funding agency in the public, commercial, or not-for-profit sectors.

**Copyright:** © 2024 The Author(s). This work is licensed under a Creative Commons Attribution4.0 International License.

With the license CC-BY, authors retain the copyright, allowing anyone to download, reuse, re-print, modify, distribute, and/or copy their contribution. The work must be properly attributed to its author.

OPEN ACCESS

## ABSTRACT

**English:** There are so many elements that we do not see in the tribal communities that are disappearing in the present day which needs to be recorded. A lot of studies have already been done in universities about tribal communities, socially, economically and traditionally, but there are so many aspects that are hidden in these that we do not see, about Tribal Nyaya Panchayat, about Tribal Artists, about Tribal Arts, about Tribal Diets, about Tribal Rituals, about Tribal Culture-Laballi Relations. A study of tribal traditional herbal medicine practices, tribal similarities and differences, tribal aspirations, cultural identities of Karnataka and tribals, tribal elder worship, tribal mother culture, tribal beliefs, tribal animal husbandry, tribal languages, tribal cultural leaders, If we look at the life of the tribal communities, we will get a deep understanding of them. These are the identities of the tribal culture which need to be noticed and who is not considering them. It is imperative to study the identities of the tribes in the face of new ideas on such issues because there are chances that these are dying out day by day.

**Kannada:** ಪ್ರಸ್ತುತ ದಿನಮಾನದಲ್ಲಿ ಬುಡಕಟ್ಟು ಸಮುದಾಯಗಳಲ್ಲಿ ನಮಗೆ ಕಾಣದೆ ಇರುವ ಅದೇಷ್ಟೋ ಅಂಶಗಳು ಕಣ್ಮರೆಯಾಗುತ್ತಿವೆ ಇವುಗಳನ್ನು ದಾಖಲಿಸುವ ಅಗತ್ಯತೆ ಇದೆ. ಬುಡಕಟ್ಟು ಸಮುದಾಯಗಳ ಬಗ್ಗೆ ಈಗಾಗಲೇ ವಿಶ್ವವಿದ್ಯಾಲಯಗಳಲ್ಲಿ ಸಾಮಾಜಿಕವಾಗಿ, ಆರ್ಥಿಕವಾಗಿ, ಸಂಪ್ರದಾಯಿಕವಾಗಿ ಸಾಕಷ್ಟು ಅಧ್ಯಯನಗಳು ನಡೆದಿವೆ ಆದರೆ ಇವುಗಳಲ್ಲಿ ಮರೆಯಾಗುತ್ತಿರುವ ಎಷ್ಟೊ ಅಂಶಗಳು ನಮ್ಮ ಕಾಣದಂತಾಗಿವೆ ಇವುಗಳ ಬಗ್ಗೆ ಕುರಿತು ಬಗೆ ಬಗೆಯ ಬುಡಕಟ್ಟು ಸಂಪ್ರದಾಯಗಳು, ಬುಡಕಟ್ಟು ರಕ್ತ-ಸಂಬಂಧಗಳು, ಬುಡಕಟ್ಟು ದೈವಗಳು, ಬುಡಕಟ್ಟು ನಂಬಿಕೆಗಳು, ಬುಡಕಟ್ಟು ಕುಲಗಳ ಬಗ್ಗೆ, ಬುಡಕಟ್ಟು ಬೆಡಗುಗಳ ಬಗ್ಗೆ, ಬುಡಕಟ್ಟು ಕಟ್ಟೆಮನೆಗಳ ಬಗ್ಗೆ, ಬುಡಕಟ್ಟು ನ್ಯಾಯ ಪಂಚಾಯಿತಿಯ ಬಗ್ಗೆ, ಬುಡಕಟ್ಟು ಕಲಾವಿದರ ಬಗ್ಗೆ, ಬುಡಕಟ್ಟು ಕಲೆಗಳ ಬಗ್ಗೆ, ಬುಡಕಟ್ಟು ಆಹಾರ ಕ್ರಮಗಳ ಬಗ್ಗೆ, ಬುಡಕಟ್ಟು ಆಚರಣೆಗಳ ಬಗ್ಗೆ, ಬುಡಕಟ್ಟು ಕಳು-ೕಳಬಳ್ಳಿಯ ಸಂಬಂಧಗಳ ಬಗ್ಗೆ. ಬುಡಕಟ್ಟು ಪಾರಂಪರಿಕ ನಾಟಿ ವೈದ್ಯ ಪದ್ಧತಿಗಳ ಬಗ್ಗೆ, ಬುಡಕಟ್ಟು ಸಾಮ್ಯತೆಗಳು ಮತ್ತು ಭಿನ್ನತೆಗಳ ಬಗ್ಗೆ, ಬುಡಕಟ್ಟು ಆಶಯಗಳ ಬಗ್ಗೆ, ಕರ್ನಾಟಕ ಮತ್ತು ಬುಡಕಟ್ಟುಗಳ ಸಂಸ್ಕೃತಿಯ ಅಸ್ಮಿತಿಗಳ ಬಗ್ಗೆ, ಬುಡಕಟ್ಟು ಹಿರಿಯರ ಆರಾಧನೆಗಳ ಬಗ್ಗೆ ಅಧ್ಯಯನ, ಬುಡಕಟ್ಟು ಮಾತೃ ಸಂಸ್ಕೃತಿಯ ಬಗ್ಗೆ, ಬುಡಕಟ್ಟು ನಂಬಿಕೆಗಳು, ಬುಡಕಟ್ಟು ಪಶುಪಾಲನೆ, ಬುಡಕಟ್ಟು ಭಾಷೆಗಳು, ಬುಡಕಟ್ಟು ಸಾಂಸ್ಕೃತಿಕ ನಾಯಕರ ಬಗ್ಗೆ ಅಧ್ಯಯನ, ಬುಡಕಟ್ಟು ಸಮುದಾಯಗಳ ಬದುಕು ಇವುಗಳೆಲ್ಲವನ್ನು ಒಡೆದು ನೋಡಿದರೆ ಇವುಗಳ ಅಂತರಾಳದ ಅರಿವು ನಮಗೆ ಸಿಗುತ್ತದೆ. ಇವು ಬುಡಕಟ್ಟು ಸಂಸ್ಕೃತಿಯ ಅಸ್ಮಿತೆಗಳು ಗಮನಿಸ ಬೇಕಾಗಿದೆ ಇವುಗಳನ್ನು ಯಾರು ಪರಿಗಣಿಸುತ್ತಿಲ್ಲ ಇಂತಹ ವಿಷಯಗಳ ಬಗ್ಗೆ ಹೊಸ ಆಲೋಚನೆಗಳ ಮುಖಾಂತರ ಬುಡಕಟ್ಟುಗಳ ಅಸ್ಮಿತೆಗಳನ್ನು ಅಧ್ಯಯನ ಮಾಡುವುದು ಅನಿವಾರ್ಯವಾಗಿದೆ ಏಕೆಂದರೆ ಇವುಗಳು ದಿನಮಾನಗಳಾದಂತೆ ನಶಿಸಿಹೋಗುವ ಸಾಧ್ಯತೆಗಳು ಇವೆ.

**Keywords**: Possibilities, Research, Tribal Literary.

**How to cite this article (APA):** Nath, C., and Kumar, S. (2024). From Colonial Servitude to Contemporary Marginalisation: Exploring the Struggles of Assam's Adivasis and Tea Garden Workers. *ShodhKosh: Journal of Visual and Performing Arts, 5*(7), 306-312 DOI: 10.29121/shodhkosh.v5.i7.2024.2594

ಪ್ರಸ್ತುತ ದಿನಮಾನದಲ್ಲಿ ಬುಡಕಟ್ಟು ಸಮುದಾಯಗಳಲ್ಲಿ ನಮಗೆ ಕಾಣದೆ ಇರುವ ಅದೇಷ್ಟೋ ಅಂಶಗಳು ಕಣ್ಮರೆಯಾಗುತ್ತಿವೆ ಇವುಗಳನ್ನು ದಾಖಲಿಸುವ ಅಗತ್ಯತೆ ಇದೆ. ಬುಡಕಟ್ಟು ಸಮುದಾಯಗಳ ಬಗ್ಗೆ ಈಗಾಗಲೇ ವಿಶ್ವವಿದ್ಯಾಲಯಗಳಲ್ಲಿ ಸಾಮಾಜಿಕವಾಗಿ, ಆರ್ಥಿಕವಾಗಿ, ಸಂಪ್ರದಾಯಿಕವಾಗಿ ಸಾಕಷ್ಟು ಅಧ್ಯಯನಗಳು ನಡೆದಿವೆ ಆದರೆ ಇವುಗಳಲ್ಲಿ ಮರೆಯಾಗುತ್ತಿರುವ ಎಷ್ಟೊ ಅಂಶಗಳು ನಮ್ಮ ಕಾಣದಂತಾಗಿವೆ ಇವುಗಳ ಬಗ್ಗೆ ಕುರಿತು ಬಗೆ ಬಗೆಯ ಬುಡಕಟ್ಟು ಸಂಪ್ರದಾಯಗಳು, ಬುಡಕಟ್ಟು ರಕ್ತ-ಸಂಬಂಧಗಳು, ಬುಡಕಟ್ಟು ದೈವಗಳು, ಬುಡಕಟ್ಟು ನಂಬಿಕೆಗಳು, ಬುಡಕಟ್ಟು ಕುಲಗಳ ಬಗ್ಗೆ, ಬುಡಕಟ್ಟು ಬೆಡಗುಗಳ ಬಗ್ಗೆ, ಬುಡಕಟ್ಟು ಕಟ್ಟೆಮನೆಗಳ ಬಗ್ಗೆ, ಬುಡಕಟ್ಟು ನ್ಯಾಯ ಪಂಚಾಯಿತಿಯ ಬಗ್ಗೆ, ಬುಡಕಟ್ಟು ಕಲಾವಿದರ ಬಗ್ಗೆ, ಬುಡಕಟ್ಟು ಕಲೆಗಳ ಬಗ್ಗೆ, ಬುಡಕಟ್ಟು ಆಹಾರ ಕ್ರಮಗಳ ಬಗ್ಗೆ, ಬುಡಕಟ್ಟು ಆಚರಣೆಗಳ ಬಗ್ಗೆ, ಬುಡಕಟ್ಟು ಕಳು-ಳಬಳ್ಳಿಯ ಸಂಬಂಧಗಳ ಬಗ್ಗೆ. ಬುಡಕಟ್ಟು ಪಾರಂಪರಿಕ ನಾಟಿ ವೈದ್ಯ ಪದ್ದತಿಗಳ ಬಗ್ಗೆ, ಬುಡಕಟ್ಟು ಸಾಮ್ಯತೆಗಳು ಮತ್ತು ಭಿನ್ನತೆಗಳ ಬಗ್ಗೆ, ಬುಡಕಟ್ಟು ಆಶಯಗಳ ಬಗ್ಗೆ, ಕರ್ನಾಟಕ ಮತ್ತು ಬುಡಕಟ್ಟುಗಳ ಸಂಸ್ಕೃತಿಯ ಅಸ್ಮಿತಿಗಳ ಬಗ್ಗೆ, ಬುಡಕಟ್ಟು ಹಿರಿಯರ ಆರಾಧನೆಗಳ ಬಗ್ಗೆ ಅಧ್ಯಯನ, ಬುಡಕಟ್ಟು ಮಾತೃ ಸಂಸ್ಕೃತಿಯ ಬಗ್ಗೆ, ಬುಡಕಟ್ಟು ನಂಬಿಕೆಗಳು, ಬುಡಕಟ್ಟು ಪಶುಪಾಲನೆ, ಬುಡಕಟ್ಟು ಭಾಷೆಗಳು, ಬುಡಕಟ್ಟು ಸಾಂಸ್ಕೃತಿಕ ನಾಯಕರ ಬಗ್ಗೆ ಅಧ್ಯಯನ, ಬುಡಕಟ್ಟು ಸಮುದಾಯಗಳ ಬದುಕು ಇವುಗಳೆಲ್ಲವನ್ನು ಒಡೆದು ನೋಡಿದರೆ ಇವುಗಳ ಅಂತರಾಳದ ಅರಿವು ನಮಗೆ ಸಿಗುತ್ತದೆ. ಇವು ಬುಡಕಟ್ಟು ಸಂಸ್ಕೃತಿಯ ಅಸ್ಮಿತೆಗಳು ಗಮನಿಸ ಬೇಕಾಗಿದೆ ಇವುಗಳನ್ನು ಯಾರು ಪರಿಗಣಿಸುತ್ತಿಲ್ಲ ಇಂತಹ ವಿಷಯಗಳ ಬಗ್ಗೆ ಹೊಸ ಆಲೋಚನೆಗಳ ಮುಖಾಂತರ ಬುಡಕಟ್ಟುಗಳ ಅಸ್ಮಿತೆಗಳನ್ನು ಅಧ್ಯಯನ ಮಾಡುವುದು ಅನಿವಾರ್ಯವಾಗಿದೆ ಏಕೆಂದರೆ ಇವುಗಳು ದಿನಮಾನಗಳಾದಂತೆ ನಶಿಸಿಹೋಗುವ ಸಾಧ್ಯತೆಗಳು ಇವೆ.

ಬುಡಕಟ್ಟು ಜನರು ಹುಟ್ಟಿನಿಂದ ಸಾಯುವತನಕ ಜೀವನದ ಉದ್ದಕ್ಕೂ ಆನೇಕ ಕಟ್ಟುಪಾಡುಗಳಿಂದ ಬಂಧಿತರಾಗಿದ್ದಾರೆ. ಈ ಬಂಧನವನ್ನು ಅಥವಾ ಕಷ್ಟಗಳಿಂದ ಪಾರಾಗಲು ಇವರು ಸ್ಥಳಿಯ ದೈವಗಳ ಮೊರೆಹೋಗುತ್ತಾರೆ. ಅವುಗಳಿಂದ ಹೇಳಿಕೆಗಳನ್ನು ಪಡೆಯುವುದರ ಮೂಲಕ ತಮ್ಮನ್ನು ದುಷ್ಟಶಕ್ತಿಯ ಕಾಕದೃಷ್ಟಿಯಿಂದ ತಪ್ಪಿಸಿಕೊಳ್ಳುತ್ತಾರೆ. ನಂತರ ಆ ದೈವಗಳಿಗೆ ಉಪಕಾರವಾಗಿ ಹರಕೆ, ಪ್ರಾಣಿಬಲಿ ಕೊಡುವುದರ ಮೂಲಕ ದುಷ್ಟಶಕ್ತಿಯಿಂದ ತಮ್ಮನ್ನು ರಕ್ಷಿಸಿಕೊಳ್ಳುತ್ತಾರೆ. ಬುಡಕಟ್ಟು ಸಮುದಾಯದವರು ನಿಯಮಗಳಿಗೆ ಬದ್ದರಾಗಿ, ದೈವಾಚರಣೆಗಳಲ್ಲಿ ಕಟ್ಟುನಿಟ್ಟಿನ ಕ್ರಮವನ್ನು ಅನುಸರಿಸುವುದರ ಮೂಲಕ ತಮ್ಮನ್ನು ಬುಡಕಟ್ಟು ದೈವಾರಾಧಕರೆಂದು ಗುರುತಿಸಿಕೊಂಡಿದ್ದಾರೆ. ಇವರು ತಮ್ಮ ಮೌಲ್ಯಗಳನ್ನು ಅನುಸರಿಸಿ ಅವುಗಳಿಂದ ಬಂಧಿತರಾಗಿದ್ದು, ಅವುಗಳನ್ನು ಕಟ್ಟುನಿಟ್ಟಿನಿಂದ ಪಾಲಿಸುತ್ತಾರೆ. ಅವುಗಳನ್ನು ಉಲ್ಲಂಘಿಸಿದರೆ ಬುಡಕಟ್ಟಿನಿಂದ ಬಹಿಷ್ಕರಿಸುತ್ತಾರೆ ಅಷ್ಟರಮಟ್ಟಿಗೆ ಇವರು ಆ ಸಂಸ್ಕೃತಿಯಿಂದ ಬಂದಿತರಾಗಿರುತ್ತಾರೆ. ಆಗಾದರೆ ಬುಡಕಟ್ಟು ಎಂಬ ಪದವನ್ನು ವಿಶ್ಲೇಶಿಸುವುದಾದರೆ 'ಬುಡಕಟ್ಟು' ಎಂಬ ಪದವನ್ನು ಈ ರೀತಿಯಾಗಿ ವಿವರಿಸಬಹುದು 'ಬುಡ' ಎಂದರೆ ಮೂಲ 'ಕಟ್ಟು' ಎಂದರೆ ಸಾಂಸ್ಕೃತಿಕ ಮೌಲ್ಯಗಳ ಕಟ್ಟು ಕಟ್ಟಳೆ, ಸಾಮಾಜಿಕ, ಸಾಂಕ್ಕೃತಿಕ, ಧಾರ್ಮಿಕ, ನಂಬಿಕೆ, ಆಚಾರ-ವಿಚಾರಗಳನ್ನು ಒಂದು ಮೂಲಕ್ಕೆ ಸೇರಿದ ಸಂಪ್ರದಾಯಗಳನ್ನು ಪಾಲಿಸುವುದು ಎಂದು ಅರ್ಥ. ಬುಡಕಟ್ಟು ಸಮುದಾಯಗಳು ಇತ್ತೀಚಿನ ದಿನಗಳಲ್ಲಿ ತನ್ನ ಮೂಲ ಸಂಸ್ಕೃತಿಯನ್ನು ಬಿಟ್ಟುಕೊಡದೆ, ಹೊಸದನ್ನು ಸ್ವೀಕರಿಸದೆ ಮಧ್ಯದ ಪರಿಸ್ಥಿತಿಯಲ್ಲಿ ಬದುಕುತ್ತಿದ್ದಾರೆ. ಇದಕ್ಕೆಲ್ಲ ಕಾರಣ ಆಧುನಿಕತೆಯ ಪ್ರಭಾವ. ಆಧುನಿಕತೆ ಮಾನವನ ಮೇಲೆ ಸವಾರಿಮಾಡುತ್ತಿದೆ. ಇವನ ರೀತಿ-ನೀತಿಗಳು, ಆಹಾರ, ಉಡುಗೆ-ತೊಡುಗೆಗಳು, ವೇಷ-ಭೂಷಣಗಳು ಇನ್ನು ಮುಂತಾದವುಗಳ ಮೇಲೆ ಆಧುನಿಕತೆ ಪರಿಣಾಮಬೀರಿದೆ. ಆಧುನಿಕತೆಒಂದು ರೀತಿ ಬಂಡವಾಳ ವ್ಯವಸ್ಥೆಯಾಗಿದೆ. ಈ ಬಂಡವಾಳ ವ್ಯವಸ್ಥೆಯಿಂದಬುಡಕಟ್ಟು ಜನರ ಜೀವನ ಪದ್ದತಿಗಳು ಹರಿದು ಹಂಚಿಹೋಗಿವೆ.

ಈ 'ಆಧುನೀಕರಣ' ಎಂಬುದು ಬುಡಕಟ್ಟು ಸಂಪ್ರದಾಯಗಳನ್ನು ಕಣ್ಮರೆ ಮಾಡುತ್ತಿದೆ. ಇಂತಹ ಆಧುನೀಕರಣದಲ್ಲಿ ಬುಡಕಟ್ಟು ಸಮುದಾಯದ ಸಂಪ್ರದಾಯಸ್ಥಿಕೆ ಎನ್ನುವಂತದ್ದು ಕುಗ್ಗುತ್ತಿರುವ ಹಂತ ತಲುಪಿದೆ. ಆಧುನೀಕತೆ ಎನ್ನುವುದುಕೇವಲ ಬುಡಕಟ್ಟು ಜನರ ಬದುಕಿನಲ್ಲಿ ಅಷ್ಟೇ ಅಲ್ಲದೆ ಇಡೀ ಸಮುದಾಯದ ಆಚಾರ-ವಿಚಾರಗಳನ್ನು, ಆಚರಣೆಗಳನ್ನು, ಕೆಲವು ಪದ್ದತಿಗಳನ್ನು, ವಿಧಿ-ನಿಷೇಧಗಳನ್ನು, ಆಹಾರ ಪದ್ದತಿಗಳನ್ನು, ವೇಷ-ಭೂಷಣಗಳನ್ನು, ಪೂಜಾರಿಯ ನಡವಳಿಕೆಯನ್ನು, ವಸತಿ ವ್ಯವಸ್ಥೆಯನ್ನು, ಜನನ, ನಾಮಕರಣ, ವಿವಾಹ, ಸೂತಕ ಇನ್ನು

ಮೊದಲಾದವುಗಳ ಮೇಲೆ ಪ್ರಭಾವ ಬೀರಿ ಇವುಗಳ ಮೌಲ್ಯಗಳನ್ನು ಬುಡಕಟ್ಟು ಸಮುದಾಯಗಳು ಕಳೆದುಕೊಳ್ಳುತ್ತಿರುವ ಹಂತ ತಲುಪಿವೆ.

'ಆಧುನೀಕತೆ' ಎನ್ನುವುದು ಮಾನವನ ಬದಲಾವಣೆಯ ಸಾಧನವಾಗಿದೆ. ಇದು ಮಾನವನ ಹೊಸ ಜೀವನದ ಕ್ರಮವನ್ನಷ್ಟೆ ಅಲ್ಲದೆ ಇಡಿ ಸಮುದಾಯ, ಗ್ರಾಮ ಮತ್ತು ಹಟ್ಟಿಯ ಮೂಲ ಸಂಪ್ರದಾಯ, ನಡುವಳಿಕೆ, ಆಚಾರ-ವಿಚಾರ, ನಂಬಿಕೆಗಳು, ವೇಷ-ಭೂಷಣಗಳು, ಆಹಾರ ಪದ್ಧತಿ, ವಸತಿ ವ್ಯವಸ್ಥೆ, ವಿವಾಹ, ನಾಮಕರಣ, ಜನನದ ಆಚರಣೆ, ಋತುಮತಿ ಆಚರಣೆ, ಸಾವಿನ ಆಚರಣೆ, ಹಾಗೂ ಬುಡಕಟ್ಟು ಸಮುದಾಯಗಳ ದೈವಾಚರಣೆಯ ಸಂದರ್ಭಗಳಲ್ಲಿ ಆಚರಿಸುವ ಹರಕೆ ಮತ್ತು ವೃತಗಳು, ಮಿಸಲು ಪರಂಪರೆ, ದಾಸಯ್ಯ ಸಂಸ್ಕೃತಿ ಇನ್ನು ಮುಂತಾದ ನಂಬಿಕೆ ಮತ್ತು ಸಂಪ್ರದಾಯಗಳು ಆಧುನಿಕತೆಯ ಪ್ರಭಾವದಿಂದ ಬದಲಾಗುವತ್ತಿವೆ. ಆಧುನೀಕತೆಯ ಪ್ರಭಾವಕ್ಕೆ ಬುಡಕಟ್ಟು ದೈವಾಚರಣೆಗಳು, ಸಾಂಪ್ರದಾಯಗಳು, ಜೀವನ ಶೈಲಿ, ಆಚರಣೆಗಳು ಮತ್ತು ದೈವಾಚರಣೆಗಳಲ್ಲಿಯೂ ಸಹ ಬದಲಾವಣೆಯನ್ನು ಕಾಣಬಹುದು. ಆಧುನಿಕತೆಯಿಂದ ನಮ್ಮ ಪೂರ್ವಜರು ರೂಢಿಸಿಕೊಂಡು ಬಂದ ಸಂಪ್ರದಾಯಸ್ಥ ಪದ್ಧತಿಗಳು ಇಂದು ಕಣ್ಮರೆಯಾಗುವ ಸ್ಥಿತಿಗೆ ಬಂದು ತಲುಪಿವೆ.

ಆಧುನಿಕತೆಯಿಂದ ಜೀವನ ವಿಧಾನಗಳು ಬದಲಾಗುತ್ತಿವೆ. ಹಳ್ಳಿ, ಹಟ್ಟಿ ಮತ್ತು ಗ್ರಾಮಗಳಿಂದ ದೊಡ್ಡ-ದೊಡ್ಡ ನಗರಗಾಳಾದ ಬೆಂಗಳೂರು, ಮಂಗಳೂರು, ಚಿಕ್ಕಮಂಗಳೂರು ಅಂತಹ ಕಾಫಿ ನಾಡುಗಳಿಗೆ ವಲಸೆ ಹೋಗಿ ತನ್ನ ಮೂಲ ಸಂಪ್ರದಾಯದ ಜೀವನ ವಿಧಾನ ಹಾಗೂ ಉಡುಗೆ-ತೊಡಿಗೆಗಳು ಮುಂತಾದವುಗಳಲ್ಲಿ ಬುಡಕಟ್ಟು ಸಮುದಾಯದ ಜನರು ಬದಲಾವಣೆಯಾಗುತ್ತಿದ್ದಾರೆ. ಇದರ ಮಧ್ಯದಲ್ಲೂ ಬುಡಕಟ್ಟು ತಮ್ಮ ಸಂಸ್ಕೃತಿಯ ಉಳುವಿಗಾಗಿ ತಮ್ಮ ಪೂರ್ವಜರು ಆಚರಿಸಿ, ಉಳಿಸಿಕೊಂಡು ಬಂದಿರುವ ಕೆಲವು ನಿಯಮ ನಿಬಂಧನೆಗಳನ್ನು, ಕಟ್ಟು-ಪಾಡುಗಳನ್ನು ಚಾಚು ತಪ್ಪದೆ ಆಚರಿಸಿಕೊಂಡು ಬರುತ್ತಿದ್ದಾರೆ. ಇವರಲ್ಲಿ ಆಧುನಿಕತೆಯಿಂದ ಜೀವನ ವಿಧಾನ ಆಚಾರ-ವಿಚಾರಗಳು, ಸಂಪ್ರದಾಯ, ನಂಬಿಕೆಗಳು, ಉಡುಗೆ-ತೊಡುಗೆ, ದೈವಾಚರಣೆ ಪೂಜಾವಿಧಾನಗಳು ಇನ್ನೂ ಮುಂತಾದವುಗಳಲ್ಲಿ ಬದಲಾಗುತ್ತಿರುವ ಸಂದರ್ಭಗಳನ್ನು ಕಾಣಲಾಗುವುದು ಇಂತಹ ಬದಲಾವಣೆ ಸಂದರ್ಭಗಳನ್ನು ದಾಖಲಿಸುವ ಅಗತ್ಯತೆ ಇದೆ. ಉದಾ : ಮ್ಯಾಸಬೇಡರು ಮೊದ-ಮೊದಲು ಬೇಟೆ ಸಂಸ್ಕೃತಿಯ ಜೊತೆಗೆ ಪಶುಪಾಲನೆಯನ್ನು ರೂಢಿಸಿಕೊಂಡರೆ, ಕಾಡುಗೊಲ್ಲರಲ್ಲಿ ಕೇವಲ ಪಶುಪಾಲನೆ ಮಾತ್ರ ಇವರ ವೃತ್ತಿಯಾಗಿ ಬೆಳೆದುಬಂದಿದೆ. ನಂತರದ ದಿನಮಾನಗಳಲ್ಲಿ ಇಂತಹ ಜೀವನೋಪಾಯ ವೃತ್ತಿಗಳು ಇಂದಿನ ಜಾಗತೀಕರಣ ಪ್ರಭಾವದಿಂದ ಬದಲಾಗಿದೆ.

ಹಿಂದಿನ ಕಾಲದಲ್ಲಿ ಮ್ಯಾಸಬೇಡರು ಮತ್ತು ಕಾಡುಗೊಲ್ಲರಲ್ಲಿ ಪಶುಪಾಲನೆಯೇ ಮೂಲ ಕಸುಬಾಗಿತ್ತು. ಇಂದು ಇದು ಬದಲಾಗಿದೆ. ಕಾಡುಗೊಲ್ಲರಲಿ ಪ್ರಸ್ತುತ ದಿನಗಳಲ್ಲಿಕುರಿ ಸಾಕಾಣಿಕೆ ಹೆಚ್ಚಾಗಿದ್ದು, ಪಶುಪಾಲನೆ ಕಡಿಮೆಯಾಗಿದೆ. ಆದರೆ ಮ್ಯಾಸಬೇಡರಲ್ಲಿ ಪಶುಪಾಲನೆ ಜೊತೆಗೆ ಕುರಿಸಾಕಾಣಿಕೆಯನ್ನು ಸಹ ಮಾಡುತ್ತಾರೆ. ಇಲ್ಲಿ ಕಾಡುಗೊಲ್ಲರಲ್ಲಿ ಪಶುಪಾಲನೆ ಕಡಿಮೆ ಆಗಿದೆ. ಕುರಿಗಳಿಂದ ಬರುವಷ್ಟು ಆದಾಯ ಪಶುಗಳಿಂದ ಬರಲಾರದು ಎನ್ನುವ ಕಾರಣಕ್ಕೆ ಇವರು ಕುರಿಸಾಕಾಣಿಕೆಯ ಕಡೆಗೆ ಹೆಚ್ಚಿನ ಒಲವನ್ನು ತೋರಿಸುತ್ತಿರುವುದು ಕಂಡುಬಂದಿದೆ. ಆದರೆ ಮ್ಯಾಸಬೇಡರಲ್ಲಿ ಪಶುಪಾಲನೆ ಇನ್ನೂ ಜೀವಂತವಾಗಿದೆ. ಏಕೆಂದರೆ ಇವರು ಪಶುಗಳನ್ನು ದೈವಗಳ ಸಂಕೇತವಾಗಿ ಕಾಣುವುದರಿಂದ ಇವರಲ್ಲಿ ದೇವರೆತ್ತುಗಳ ಸಂಖ್ಯೆ ಹಾಗೂ ಮನೆಯಲ್ಲಿ ಪಶುಗಳ ಸಂಖ್ಯೆ ಅಧಿಕವಾಗಿವೆ. ಇಂತಹ ಎರಡು ಸಮುದಾಯಗಳ ವೃತ್ತಿಗಳಲ್ಲಿ ವ್ಯತ್ಯಾಸಕ್ಕೆ ಪ್ರಮುಖ ಕಾರಣ ಹುಲ್ಲುಗಾವಲುಗಳು ಇಲ್ಲದಿರುವುದು. ಚಿತ್ರದುರ್ಗ ಜಿಲ್ಲೆಯಲ್ಲಿ ಯಾವುದೇ ನೀರಾವರಿ ಯೋಜನೆ ಇಲ್ಲ. ನೀರು ಮತ್ತು ಹುಲ್ಲಿನ ಸಮಸ್ಯೆಯಿಂದ ಸಣ್ಣ ಪ್ರಮಾಣದಲ್ಲಿ ಈ ಸಮುದಾಯಗಳು ಕುರಿ ಮತ್ತು ಪಶುಸಾಕಾಣಿಕೆಯನ್ನು ಈ ಎರಡು ಬುಡಕಟ್ಟುಗಳು ಇಂದಿಗೂ ಅಳವಡಿಸಿಕೊಂಡಿದ್ದಾರೆ. ಈ ಹಿನ್ನಲೆಯಲ್ಲಿ ಕಾಡುಗೊಲ್ಲ ಮತ್ತು ಮ್ಯಾಸಬೇಡರ ವೃತ್ತಿಗಳಲ್ಲಿಯೂ ಸಹ ಬದಲಾವಣೆಯಾಗಿರುವುದನ್ನು ಗಮನಿಸಬಹುದು ಇವುಗಳನ್ನು ದಾಖಲಿಸುವ ಅಗತ್ಯತೆ ಇದೆ.

ಬುಡಕಟ್ಟುಗಳ ಜೀವನ ವಿಧಾನದ ವಸತಿ ವ್ಯವಸ್ಥೆಯಲ್ಲಿಯೂ ಸಹ ಬದಲಾವಣೆಗಳಾಗಿವೆ. ಬುಡಕಟ್ಟುಗಳ ವಸತಿಗೃಹಗಳು ಸಾಮಾನ್ಯವಾಗಿ ನೈಸರ್ಗಿಕ ವಸ್ತುಗಳಿಂದ ಹುಲ್ಲಿನ ಗುಬ್ಬಗಳನ್ನು ಕಟ್ಟಿಕೊಳ್ಳುತ್ತಿದ್ದರು. ಇಂತಹ ಗುಬ್ಬಗಳು ಆಧುನಿಕರಣದ ಪ್ರಭಾವದಿಂದ ಸಿಮೇಂಟ್, ಇಟ್ಟಿಗೆ, ಕಬ್ಬಣದಂತಹ ವಸ್ತುಗಳನ್ನು ಉಪಯೋಗಿಸಿಕೊಂಡು, ಆರ್.ಸಿ.ಸಿ

ಮನೆಗಳನ್ನು ಗ್ರಾಮ ಮತ್ತು ಹಟ್ಟಿಗಳಲ್ಲಿ ಕಟ್ಟಿಕೊಂಡಿರುವುದನ್ನು ಕಾಣಬಹುದು. ಅಂದು ನಿಸರ್ಗದಲ್ಲಿ ಸಿಗುವ ಕಾಂಸಿ ಹುಲ್ಲು, ಬಾದೆಹುಲ್ಲು ಮತ್ತಿತರೆ ಹುಲ್ಲುಗಳಿಂದ ಗುಡಿಸಲುಗಳನ್ನು ಕಟ್ಟಿಕೊಂಡು ನಿಸರ್ಗ ಜೀವಿಗಳೆಂದು ಗುರುತಿಸಿಕೊಂಡಿದ್ದ ಬುಡಕಟ್ಟು ಸಮುದಾಯಗಳು ಇಂದು ಆಧುನಿಕರಣದ ಪ್ರಭಾವದಿಂದ ಮುಂದುವರೆದು ಜೀವನ ನಡೆಸುತ್ತಿವೆ. ಬುಡಕಟ್ಟು ಸಮುದಾಯಗಳು ವಾಸಿಸುವ ಬಹುತೇಕ ಸ್ಥಳಗಳು ಹಟ್ಟಿಗಳಾಗಿವೆ. ಇಂತಹ ಹಟ್ಟಿಗಳಲ್ಲೂ ಸಹ ಕಾಂಕ್ರೀಟ್‌ನಿಂದ ನಿರ್ಮಿಸಿದ ಆಧುನಿಕ ಶೈಲಿಯ ಮನೆಗಳು ಕಂಡುಬರುತ್ತವೆ. ಅಂದಿನ ಹುಲ್ಲಿನ ಗುಡಿಸಲುಗಳು ಇಂದು ಅತೀ ಕಡಿಮೆಯಾಗಿವೆ. ಆಧುನೀಕರಣದ ಶೈಲಿಯಿಂದ ನಿರ್ಮಿಸುವ ಹುಲ್ಲಿನ ಕೊಟ್ಟಿಗೆಯ ಗುಡಿಸಲುಗಳ ಸ್ಥಳಗಳಲ್ಲಿ ಇಂದು ಸಿಮೇಂಟ್‌ನಿಂದ ಕೂಡಿದ ಮನೆಗಳು ನಿರ್ಮಾಣವಾಗುತ್ತಿರುವ ಹಿಂದಿನ ಉದ್ದೇಶವನ್ನು ಅರಿಯ ಬೇಕಾಗಿದೆ.

ಬುಡಕಟ್ಟುಗಳ ವಸತಿ ವ್ಯವಸ್ಥೆಯ ಜೊತೆಗೆ ವೇಷ-ಭೂಷಣಗಳಲ್ಲಿಯೂ ಸಹ ಬದಲಾವಣೆಯಾಗಿರುವುದು ಕಂಡುಬರುತ್ತದೆ. ಹಿಂದಿನ ಕಾಲದಲ್ಲಿ ಬುಡಕಟ್ಟು ಸಂಪ್ರದಾಯಸ್ಥ ಪುರುಷ ಮತ್ತು ಮಹಿಳೆಯರು ಸರಳವಾದ ಉಡುಪುಗಳನ್ನು ಧರಿಸುತ್ತಿದ್ದರು. ಆದರೆ ಇಂದು ಆಧುನಿಕತೆಯಿಂದ ಇವರ ಉಡುಪುಗಳಲ್ಲಿಯೂ ಸಹ ಸಾಕಷ್ಟು ಬದಲಾವಣೆಗಳಾಗಿವೆ. ಸಂಪ್ರದಾಯಸ್ಥ ಉಡುಪುಗಳಾದ ಸೀರೆ, ನಿಲುವಾದ ಬಿಳಿ ಅಂಗಿ, ಪೇಟ, ಕಡಗ, ಪುರುಷರು ತಲೆ ಕೂದಲನ್ನು ತುರುಬು ಕಟ್ಟುವುದು, ಬಂಗಾರದ ಓಲೆ, ಬುಗಡಿ ಕಡ್ಡಿ, ತೋಳಬಂದಿ, ಗೆಜ್ಜೆಪಟ್ಟಿ, ಮೂಗುಬಟ್ಟು, ಅಡ್ಡಿಕೆ, ಕಾಸಿನಸರ, ಪದಕ, ಬೆಳ್ಳಿಕಡಗ ಮೊದಲಾದ ಆಭರಣಗಳನ್ನು ಬುಡಕಟ್ಟಿನ ಮಹಿಳೆ ಮತ್ತು ಪುರುಷರು ಈ ಹಿಂದೆ ಬಳಸುತ್ತಿದ್ದರು. ಆದರೆ ಇಂದು ಆಧುನಿಕತೆಯಿಂದ ಬುಡಕಟ್ಟುಗಳಲ್ಲಿ ವಿದ್ಯಾವಂತರ ಸಂಖ್ಯೆ ಅಧಿಕವಾಗಿದ್ದು, ದೊಡ್ಡ ದೊಡ್ಡ ನಗರಗಳಲ್ಲಿ ವಿದ್ಯಾಭ್ಯಾಸ ಮಾಡಿತ್ತಿರುವ ಯುವಕ ಮತ್ತು ಯುವತಿಯರು ಈ ಸಂಪ್ರದಾಯಸ್ಥ ಉಡುಪುಗಳನ್ನು ಧರಿಸದೆ ಪ್ಯಾಂಟು, ಟೀಷರ್ಟ, ಚುಡಿದರ, ಗಾಗ್ರ, ಲೆಹಾಂಗ, ಕುರ್ತ, ಮಿಡಿ, ಲೆಗ್ಗಿನ್ಸ್ ಇನ್ನೂ ಮುಂತಾದ ಹಲವು ವಿನ್ಯಾಸದ ಉಡುಪುಗಳನ್ನು ತೊಡುತ್ತಿದ್ದಾರೆ. ಆಧುನೀಕರಣದ ಪ್ರಭಾವದಿಂದ ಇಂತಹ ಬದಲಾವಣೆ ಸಾಧ್ಯವಾಗಿರುವುದನ್ನು ಗಮನಿಸಿ ಇವುಗಳನ್ನು ದಾಖಲಿಸುವ ಅಗತ್ಯತೆ ಇದೆ.

ಇನ್ನೂ ಇವರ ಜೀವನಾವರ್ತನ ಆಚರಣೆಗಳಾದ ಜನನ, ನಾಮಕರಣ, ಋತುಮತಿ ಮತ್ತು ವಿವಾಹ ಆಚರಣೆಗಳು ಸಹ ಆಧುನಿಕ ಜೀವನ ಶೈಲಿಯಿಂದ ಕೆಲವು ಬುಡಕಟ್ಟು ಆಚರಣೆಗಳಲ್ಲಿ ಬದಲಾಗಿರುವುದನ್ನು ಗುರುತಿಸಬಹುದು. ಬುಡಕಟ್ಟು ಸಮುದಾಯಗಳಲ್ಲಿ ಪ್ರಾರಂಭದ ದಿನಮಾನಗಳಲ್ಲಿ ಜನನದ ಕ್ರಿಯೆ ಸ್ವಾಭಾವಿಕ ಮತ್ತು ಶಾರೀರಿಕ ಕ್ರೀಯೆಯಾದರೂ ಇದು ಇವರಿಗೆ ಸೂತಕ ರೀತಿಯದ್ದು. ಇದನ್ನು 'ಸೂತಕ' ಎಂದು ಭಾವಿಸುತ್ತಿದ್ದದು. ಇಂತಹಾ ಸೂತಕವನ್ನು(ಮುಟ್ಟನ್ನು) ಇಂದು ಪರಿಗಣನೆಗೆತೆಗೆದುಕೊಳ್ಳುವುದಿಲ್ಲ. ಬುಡಕಟ್ಟು ಸಮುದಾಯಗಳ ಮನೆಗಳಲ್ಲಿ ವಿದ್ಯಾವಂತರ ಸಂಖ್ಯೆ ಹೆಚ್ಚಾಗಿರುವುದರಿಂದ ಇಂತಹ ಜನನದ ಕ್ರೀಯೆಯನ್ನು ಸೂತಕ ಎಂದು ಭಾವಿಸುವುದಿಲ್ಲ. ಈ ಹಿಂದೆ ಜನನ ಕ್ರಿಯೆಯಲ್ಲಿ ಸೂತಕ ಎಂದು ಭಾವಿಸಿ, ಸೂತಕವಾಗಿರುವ ಮನೆಗಳಿಗೆ ಯಾರು ಹೋಗುವುದಿಲ್ಲ ಮತ್ತು ಬೇರೆಯವರನ್ನು ಮನೆ ಒಳಗೆ ಬಿಡಿಸಿಕೊಳ್ಳುತ್ತಿರಲಿಲ್ಲ. ಆದರೆ ಇಂದು ಆಧುನಿಕ ಪ್ರಜ್ಞೆಯಿಂದ ಇಂತಹ ನಿಯಮಗಳು ಇವರಲ್ಲಿ ಕಣ್ಮರೆಯಾಗಿವೆ. ಅಲ್ಲದೆ ಜನನದ ಕ್ರೀಯೆ ಹಿಂದೆ ಮನೆಗಳಲ್ಲಿ ನಡೆಯುತ್ತಿತ್ತು. ಇಂದು ಆಶಾ ಕಾರ್ಯಕರ್ತರಿಂದ ಹಟ್ಟಿ ಅಥವಾ ಗ್ರಾಮದ ಮಹಿಳೆಯರು ಸಾರ್ವಜನಿಕ ಆಸ್ಪತ್ರೆಗಳಲ್ಲಿ ಮಗುವಿಗೆ ಜನ್ಮ ನೀಡುವಂತಹ ಕ್ರೀಯೆ ನಡೆಯುತ್ತಿದೆ. ಇದಕ್ಕೆಲ್ಲಾ ಕಾರಣ ಆಧುನಿಕರಣವಾಗಿದೆ. ಬದಲಾವಣೆ ಜಗದ ನಿಯಮ ಇದು ನಿರಂತರವಾಗಿ ಬದಲಾಗುತ್ತಿರುತ್ತದೆ. ಜನನ ಕ್ರೀಯೆ ಈ ಹಿಂದೆ ಗುಡಿಸಲು ಮನೆಗಳಲ್ಲಿ ನಡೆದರೆ ಇಂದು ಆಸ್ಪತ್ರೆಗಳಲ್ಲಿ ನಡೆಯುತ್ತದೆ. ಅದೇ ರೀತಿ ನಾಮಕರಣ, ಮದುವೆ ಮುಂತಾದ ಆಚರಣೆಗಳು ಸಹ ಇಂದು ಬದಲಾಗಿವೆ. ಜನಿಸಿದ ಮಗುವಿಗೆ ವ್ಯಾವಹಾರಿಕ ಗುರುತಿಗೆ ನಾಮಕರಣ ಇಡುವ ಸಂಪ್ರದಾಯ ಇಂದು ಬದಲಾಗಿದೆ. ಈ ಹಿಂದೆ ನಾಮಕರಣವನ್ನು ಮನೆಗಳಲ್ಲಿ ಇಡುತ್ತಿದ್ದರು, ಇಂದು ಕಲ್ಯಾಣ ಮಂಟಪಗಳಲ್ಲಿ ಜರುಗಿಸುವುದನ್ನು ಕಾಣಬಹುದು. ಇದಕ್ಕೆಲ್ಲಾ ಆಧುನಿಕರಣವೇ ಪ್ರಮುಖ ಕಾರಣವಾಗಿದೆ. ಇಂದು ಜನನ, ನಾಮಕರಣ, ಮದುವೆ ಇನ್ನು ಮುಂತಾದ ಕಾರ್ಯಗಳು ಹಿಂದಿಗಿಂತ ಇಂದು ಆಧುನೀಕರಣವಾಗಿ ಬದಲಾಗುವುದರ ಜೊತೆಗೆ ಈ ಹಿಂದೆ ಇದ್ದ ಮಾನವೀಕ ಸಂಬಂಧಗಳು ನಶಿಸಿಹೊಗುವ ಹಂತಕ್ಕೆ ತಲುಪಿವೆ ಇವುಗಳನ್ನು ದಾಖಲಿಸುವ ಅಗತ್ಯತೆ ಇಂದು ಮಾಡಬೇಕಾಗಿದೆ.

ಹಾಗೇಯೆ ಇವರಲ್ಲಿ ಋತುಮತಿ ಆಚರಣೆ ಜೀವನಾವರ್ತನ ಆಚರಣೆಗಳಲ್ಲಿ ಒಂದಾಗಿದೆ. ಹೆಣ್ಣಿನ ದೈಹಿಕ ಕ್ರೀಯೆಯಲ್ಲಾದ ಬದಲಾವಣೆಯನ್ನು ಸೂಚಿಸುತ್ತದೆ. ಮಹಿಳೆ ಬಾಲ್ಯವ್ಯವಸ್ಥೆಯಿಂದ ಯೌವನವ್ಯವಸ್ಥೆಗೆ ಕಾಲಿಡುತ್ತಿರುವ ಸಂಕೇತವಾಗಿದೆ. ಇದು ಈ ಸಮುದಾಯಗಳಲ್ಲಿ ಒಂದು ಆಚರಣೆಯ ಪದ್ಧತಿಯಾಗಿದೆ. ಋತುಮತಿ ಆಚರಣೆ ಬೇರೆ ಬೇರೆ ಬುಡಕಟ್ಟುಗಳಲ್ಲಿ ಬೇರೆ ಬೇರೆ ನಡೆಯುತ್ತಿರುವುದು ಕಂಡುಬರುತ್ತದೆ. ಇವುಗಳನ್ನು ತೌಲನಿಕವಾಗಿ ಅಧ್ಯಯನ ಮಾಡಬೇಕಾಗಿದೆ ಕೆಲವು ಬುಡಕಟ್ಟಿನ ಜನರು ಊರ ಹೊರ ವಲಯದಲ್ಲಿ ಗುಡಿಸಲನ್ನು ನಿರ್ಮಿಸಿದರೆ, ಕೆಲವರು ವಾಸಿಸುವ ಮನೆಯ ಪಕ್ಕದಲ್ಲಿ ಗುಡಿಸಲನ್ನು ನಿರ್ಮಿಸುತ್ತಾರೆ. ಬುಡಕಟ್ಟುಗಳು ಈ ಹಿಂದೆ ಹಟ್ಟಿಗಳ ಹೊರವಲಯದಲ್ಲಿ ಗುಡಿಸಲನ್ನು ನಿರ್ಮಿಸುತ್ತಿದ್ದರು. ಆದರೆ ಇಂದು ಆಧುನಿಕ ಪ್ರಜ್ಞೆಯ ಮನೋಭಾವನೆಯಿಂದ ಇದು ಬದಲಾಗಿದೆ ಋತುಮತಿಯಾದ ಹೆಣ್ಣಿಗೆ ಮನೆಯ ಪಕ್ಕದಲ್ಲೇ ಗುಡಿಸಲನ್ನು ನಿರ್ಮಿಸುವುದು ಇಂದು ಕಂಡುಬರುತ್ತದೆ. ಇಂದು ಈ ಆಚರಣೆ ಪದ್ಧತಿಯನ್ನು ಆಚರಿಸುವುದು ಕಡಿಮೆಯಾಗಿದೆ. ಈ ಆಚರಣೆಯಿಂದ ಋತುಮತಿಯಾದ ಹೆಣ್ಣು ಮುಜುಗರಕ್ಕೀಡಾಗುವುದರಿಂದ ಇಂತಹ ಪದ್ಧತಿಯನ್ನು ಆಚರಿಸಿಕೊಳ್ಳಲು ಇಚ್ಛಿಸುವುದಿಲ್ಲ ಇಂತಹ ಸಂಪ್ರದಾಯಗಳು ಇಂದು ಕಣ್ಮರೆಯಾಗುತ್ತಿರುವುದನ್ನು ಗಮನಿಸಬೇಕಾಗಿದೆ.

ಇದೇ ರೀತಿ ಈ ಸಮುದಾಯಗಳಲ್ಲಿ ವಿವಾಹ ಆಚರಣೆಗಳಲ್ಲಿ ಬದಲಾವಣೆಗಳಾಗಿರುವುದನ್ನು ಕಾಣಬಹುದು. ಬುಡಕಟ್ಟು ಸಮುದಾಯದವರು ಬಹುತೇಕ ಮದುವೆ ಕಾರ್ಯಗಳನ್ನು ಮನೆ ಮುಂದೆಯೇ ನೆರವೇರಿಸುತ್ತಿದ್ದರೂ, ಇತ್ತಿಚಿನ ದಿನಗಳಲ್ಲಿ ಇವರು ಕಲ್ಯಾಣ ಮಂಟಪಗಳಲ್ಲಿ ವಿವಾಹಗಳನ್ನು ಮಾಡುವುದು ಕಂಡುಬರುತ್ತದೆ ಈ ಬದಲಾವಣೆ ವ್ಯವಸ್ಥೆಯನ್ನು ಗುರುತಿಸಬೇಕಾಗಿದೆ.

ಹೀಗೆ ಜೀವನಾರ್ವತ ಆಚರಣೆಗಳಲ್ಲಿ ಅಷ್ಟೆ ಬದಲಾವಣೆ ಹೊಂದದೆ. ದೈವಗಳ ಪರಿಕಲ್ಪನೆಗಳಲ್ಲಿಯೂಸಹ ಬದಲಾವಣೆ ಹೊಂದಿರುವುದನ್ನು ಗುರುತಿಸಬಹುದು. ಉದಾ: ಕಾಡುಗೊಲ್ಲ ಮತ್ತು ಮ್ಯಾಸಬೇಡ ಸಮುದಾಯಗಳು ದೈವಾಚರಣೆಗಳಲ್ಲಿ ಮೂಲ ಪರಂಪರೆ ಮತ್ತು ರೂಢಿ ಸಂಪ್ರದಾಯ ಮುಂತಾದ ಸಂಸ್ಕೃತಿಯನ್ನು ಇಂದು ಬುಡಕಟ್ಟುಗಳು ತಮ್ಮ ಮೂಲ ಸಂಪ್ರದಾಯಗಳನ್ನು ಉಳಿಸಿಕೊಳ್ಳಲು ಆಧುನಿಕರಣದೊಂದಿಗೆ ಸ್ಪರ್ಧೆಗಿಳಿದಿರುವಂತಿದೆ. ಬದಲಾಗುತ್ತಿರುವ ಸಂಪ್ರದಾಯಗಳು, ಸಾಮಾಜಿಕ ಸನ್ನಿವೇಶಗಳಲ್ಲಿ ಆಧುನಿಕರಣವೆ ಮುಂಚೂಣಿಯಲ್ಲಿದೆ. ಪೌಳಿ ಒಳಗಿದ್ದ ದೇವರ ಹುಲ್ಲಿನ ಗುಬ್ಬಗಳು, ಆಯುಧಗಳು, ದೇವರ ವಸ್ತುಗಳಿಗೆ ಇಂದು ಮೂರ್ತಿ ರೂಪಗಳು, ಬೆಳ್ಳಿ, ಬಂಗಾರ, ರೇಷ್ಮೆ ಮುಂತಾದ ಆಧುನಿಕ ವಸ್ತುಗಳ ಬಳಕೆ ಪ್ರಾರಂಭವಾಗಿದೆ. ಹಿಂದೆ ಇಂತಹ ವಸ್ತುಗಳು ಬಳಕೆಯಾಗಿರಲಿಲ್ಲ. ಇಂದು ಆಧುನಿಕ ಪ್ರಭಾವದಿಂದ ದೇವರ ಒಡವೆಗಳು ಸಹ ಬದಲಾಗಿವೆ. ಇದರಿಂದ ಬುಡಕಟ್ಟು ದೇವರು ಸಹ ನವೀಕರಣಗೊಂಡಿದೆ ಎಂದು ಹೇಳಬಹುದು. ಹಿಂದೆ ಇದ್ದ ಆಚಾರ-ವಿಚಾರ, ರೂಢಿ ಸಂಪ್ರದಾಯಗಳು ಇಂದಿನ ಜನರಿಗೆ ಗೊಡ್ಡು ಸಂಪ್ರದಾಯಗಳಿಗಾಗಿ ಒಣಹರಟೆಗಳಾಗಿ ಕಾಣುತ್ತವೆ. ದೊಡ್ಡ ನಗರ, ಪಟ್ಟಣಗಳಲ್ಲಿ ವಿದ್ಯಾಭ್ಯಾಸಮಾಡುತ್ತಿರುವ ಯುವಕರು ದೇವರುಗಳ ಮೇಲೆ ನಂಬಿಕೆ ಇಲ್ಲದೆ ದೇವರುಗಳ ಮೇಲಿ ಮೊದಲು ಇದ್ದಷ್ಟು ಕಾಳಜಿ ಇಂದಿನ ಯುವಕರಲ್ಲಿಲ್ಲ. ಇದಕ್ಕೆಲ್ಲಾ ಕಾರಣ ಆಧುನೀಕರಣವಾಗಿದೆ. ಇಂದಿನ ಶಿಕ್ಷಣ ಮೂಢ ನಂಬಿಕೆಯ ವಿರುದ್ಧವಾಗಿರುವುದರಿಂದ ಪ್ರಸಕ್ತ ಸನ್ನಿವೇಶವನ್ನು ಅರ್ಥೈಸುವ ಗುಣಗಳನ್ನು ಕಲಿಸುವುದರಿಂದ ಮೊದಲಿದ್ದಷ್ಟು ದೇವರ ಮೇಲಿನ ನಂಬಿಕೆ ಇಂದು ಬುಡಕಟ್ಟು ಸಮುದಾಯದ ವಿದ್ಯಾವಂತರಲ್ಲಿ ಕಂಡುಬರುವುದಿಲ್ಲ ಇವುಗಳಿಗೆಲ್ಲ ಕಾರಣಗಳನ್ನು ಕಂಡುಕೊಳ್ಳಬೇಕಾಗಿದೆ.

ಬುಡಕಟ್ಟು ಸಮುದಾಯಗಳ ಜೀವನ ವಿಧಾನದ ಜೊತೆ ಇವರ ಸಂಸ್ಕೃತಿ, ರೂಢಿ ಸಂಪ್ರದಾಯಗಳು, ಆಚರಣೆಗಳು, ಮೀಸಲು ಪರಂಪರೆಗಳು, ಜೀವನ ಪದ್ಧತಿ, ದೇವರ ಗುಬ್ಬಗಳು, ದೇವರೆತ್ತುಗಳು ಕ್ಷೀಣಿಸುವಿಕೆ, ಕಿಲಾರಿ ಪದ್ಧತಿ ಇನ್ನೂ ಮುಂತಾದವುಗಳಲ್ಲಿ ಬುಡಕಟ್ಟು ಸಮುದಾಯಗಳ ಸಂಸ್ಕೃತಿಕ ಕಾರಣಗಳು ಮತ್ತು ಹೊಸ ಸಾಧ್ಯತೆಗಳನ್ನು ಅಧ್ಯಯನ ಮಾಡಬೇಕಾಗಿದೆ. ಬುಡಕಟ್ಟು ಜನರು ತಮ್ಮ ಕುಟುಂಬಕ್ಕೆ, ಸಮುದಾಯಕ್ಕೆ ಮತ್ತು ಊರಿಗೆ ಬರಗಾಲ ಬಂದರೆ ತಮ್ಮ ವಿರುದ್ಧ ತಮ್ಮ ಸಮುದಾಯದ ದೈವಗಳು ಮುನಿಸಿಕೊಂಡಿವೆ ಎಂಬ ಕಲ್ಪನೆ ಅವರದ್ದಾಗಿದೆ. ಈ ಕಂಟಕದಿಂದ ಪಾರಾಗಲು ತಮ್ಮ ತಮ್ಮ ಕುಲ ದೈವಗಳನ್ನು ಆಚರಿಸಿ, ಅವುಗಳನ್ನು ಸಂತೃಪ್ತಿಪಡಿಸಿ, ಅವುಗಳಿಂದ ಆಶೀರ್ವಾದ ಮತ್ತು ಹೇಳಿಕೆಗಳನ್ನು(ಮಾರ್ಗದರ್ಶನ) ಪಡೆದು ಬಂದ ಕಂಟಕದಿಂದ ಪಾರಾಗುವ ಎಷ್ಟೋ ಸಂದರ್ಭಗಳು ಬುಡಕಟ್ಟು ಜನಾಂಗದಲ್ಲಿ ಕಂಡುಬರುತ್ತವೆ ಅಷ್ಟು ಮುಗ್ದ ಬುಡಕಟ್ಟು ಸಮುದಾಯಗಳು ಇಂದು ಬದಲಾಗುವ ಹಂತ ತಲುಪಿದ ಮಾರ್ಗಗಳನ್ನು ಇಂದು ಅಧ್ಯಯನ ಮಾಡಬೇಕಾಗಿದೆ.

ಬುಡಕಟ್ಟು ಜನರು ನಿಸರ್ಗವನ್ನು ದೇವರೆಂದು ನಂಬಿದವರು ಇವರು ತಮ್ಮ ಹೊಲದಲ್ಲಿ ಸಾಗುವಳಿ ಮಾಡುವ ಸಂದರ್ಭದಲ್ಲಿ ದೈವವನ್ನು ನೆನೆಯುವುದು ಅವರ ಸಂಪ್ರದಾಯವಾಗಿರುತ್ತದೆ. ದೈವಗಳಿಲ್ಲದೆ ಅವರು ಯಾವುದೇ ಕೆಲಸ ಕಾರ್ಯಗಳನ್ನು ಆರಂಭಿಸುವುದಿಲ್ಲ. ಬೆಳಗಿನಿಂದ ಸಂಜೆಯ ತನಕ ತನ್ನ ಹೊಲದ ದುಡಿಮೆಯಲ್ಲಿ ಅಥವಾ ಇತರೆ ಕೆಲಸ ಕಾರ್ಯಗಳಲ್ಲಿ ದೇವರ ಆಸರೆ ಇವರಿಗೆ ಬೇಕೇ ಬೇಕು. ಇವರ ಎಲ್ಲ ಚಿಂತನೆಗಳೂ, ಕ್ರಿಯೆಗಳೂ ಕೂಡ ದೈವಗಳ ಕೃಪೆಯಿಂದ ಸಾಗುತ್ತವೆ ಎಂಬ ಕಲ್ಪನೆ ಇವರಲ್ಲಿದೆ. ಇವರು ಬಿತ್ತುವ ಸಂದರ್ಭದಲ್ಲಿ, ಫಸಲನ್ನು ಕೊಯ್ಯುವ ಸಂದರ್ಭದಲ್ಲಿ, ಉಳಿಮೆ ಮಾಡುವ ಸಂದರ್ಭದಲ್ಲಿಹೊಲದಲ್ಲೆ ಇರುವ ಮೂರು ಕಲ್ಲುಗಳನ್ನು ನೀರಿನಲ್ಲಿ ತೊಳೆದು ಸಾಲಾಗಿ ಇಟ್ಟು ಅವುಗಳಿಗೆ ಕುಂಕುಮ ಎಲೆ ಅಡಿಕೆ ಇಟ್ಟು ಪೂಜಿಸುವುದು, ಇಂತಹ ಕ್ರೀಯೆ ಇವರಲ್ಲಿ ಸರ್ವೇ ಸಾಮಾನ್ಯವಾಗಿ ಕಂಡುಬರುತ್ತದೆ. ಇವು ಇವರ ಕಲ್ಪನೆಯಲ್ಲಿ ಪ್ರಾಥಮಿಕ ದೈವಗಳಾಗಿ ಕಂಡುಬರುತ್ತವೆ. ಈ ಮೂರು ಕಲ್ಲುಗಳಲ್ಲಿ ಇವರು ದೈವಗಳನ್ನು ಈ ರೀತಿಯಾಗಿ ಕಂಡುಕೊಂಡಿದ್ದಾರೆ. ಒಂದು ಭೂಮಿ ತಾಯಿ, ಎರಡನೆಯದು ಮಳೆರಾಯ, ಮೂರನೆಯದಾಗಿ ಬೆನವಣ್ಣ. ಈ ಮೂರು ಅವರ ದೃಷ್ಟಿಯಲ್ಲಿ ಕ್ರಮವಾಗಿ ಒಂದು ಸೃಷ್ಟಿಸುವ, ಪೋಷಿಸುವ, ಮತ್ತು ರಕ್ಷಿಸುವ ಇವು ಬುಡಕಟ್ಟು ಜನಾಂಗದ ಜೀವನದ ಬದುಕಿನುದ್ದಕ್ಕೂ ಯಾವುದೇ ಸಂದರ್ಭದಲ್ಲಿ ಇಂತಹ ದೈವತ್ವದ ಕಲ್ಪನೆಯನ್ನುಸೃಷ್ಟಿಸಿಕೊಳ್ಳುತ್ತಾರೆ. ಇವರು ದೇವರಿಲ್ಲದೆ ಯಾವುದನ್ನು ಆರಂಭಿಸುವುದಿಲ್ಲ. ಇವರ ಎಲ್ಲ ಚಿಂತನೆ ಕ್ರಿಯೆಗಳು ದೈವಗಳ ಕೃಪೆಯಿಂದ ಸಾಗುತ್ತವೆ ಎಂಬ ಕಲ್ಪನೆ ಇವರದ್ದಾಗಿದೆ. ವ್ಯಕ್ತಿ, ಕುಟುಂಬ, ಸಮೂಹ, ಕುಲ, ಹಟ್ಟಿ, ಗ್ರಾಮ ಇವುಗಳಿಗೆಲ್ಲ ತಾವು ಬಯಸಿದ್ದು ಸಿಗದೇ ಇದ್ದಾಗ, ಕುಟುಂಬಕ್ಕೆ ಸಮೂಹಕ್ಕೆ ಬರಗಾಲ ಬಂದು ದಿಕ್ಕು ತೋಚದೆ ಇರುವಾಗ, ಇದರ ಪರಿಹಾರಕ್ಕಾಗಿ ದೈವಗಳ ಮೊರೆ ಹೋಗುವುದು, ಬುಡಕಟ್ಟು ಜನರಲ್ಲಿ ಸಾರ್ವೇಸಾಮಾನ್ಯವಾಗಿ ಕಂಡುಬರುತ್ತದೆ. ಬುಡಕಟ್ಟು ಜನಾಂಗದವರು ದೈವಗಳನ್ನು ಬಹುತೇಕವಾಗಿ ತಮ್ಮ ಕುಟುಂಬದ ಹಿರಿಯ ವ್ಯಕ್ತಿಗಳು ಸತ್ತ ನಂತರ ಅವರನ್ನು ದೈವತ್ವಕ್ಕೆ ಏರಿಸಿ, ಅವರಿಗೆ ಒಂದು ಆಕಾರಕೊಟ್ಟು, ಅವರಲ್ಲಿ ದೈವ ಸ್ವರೂಪವನ್ನು ಕಂಡು, ನಿಗಧಿತ ಕಾಲದಲ್ಲಿ ಸಾಂಸ್ಕೃತಿಕವಾಗಿ, ಧಾರ್ಮಿಕವಾಗಿ, ಸಾಂಪ್ರದಾಯಿಕವಾಗಿ ದೈವವನ್ನು ಆಚರಿಸುವುದು ಇವರಲ್ಲಿ ಕಂಡುಬರುತ್ತದೆ. ಇವರು ತಮ್ಮ ಮನೆಯ ಪೂರ್ವೀಕರನ್ನು, ಸಾಂಸ್ಕೃತಿಕ ನಾಯಕರನ್ನು ಹಾಗೂ ವೀರಗಾರರನ್ನು ಆರಾಧಿಸುತ್ತಾರೆ. ಹೀಗೆ ದೈವ ಪರಿಕಲ್ಪನೆಗಳ ಹಿನ್ನೆಲೆಯಲ್ಲಿ ಬುಡಕಟ್ಟು ಜನರು ಯಾವ ರೀತಿ ದೈವಗಳೊಂದಿಗೆ ಸಂಬಂಧ ಹೊಂದಿದ್ದಾರೆ ಯಾಕೆ ಈ ನಿಸರ್ಗ ಮತ್ತು ದೈವಗಳನ್ನು ನಂಬುತ್ತಾರೆ ಎಂಬುದನ್ನು ಶೋಧಿಸಬೇಕಾಗುತ್ತದೆ ನಿಸರ್ಗದೊಂದಿಗೆ ಈ ಬುಡಕಟ್ಟು ಜನರ ಸಂಬಂಧವನ್ನು ಗುರುತಿಸಬೇಕಾಗುತ್ತದೆ.

## ಬುಡಕಟ್ಟು ಸಮುದಾಯಗಳಲ್ಲಿ ಹೊಸ ಅಧ್ಯಯನದ ಸಾಧ್ಯತೆಗಳನ್ನು ಈ ರೀತಿ ಪಟ್ಟಿ ಮಾಡಬಹುದು.

1. ಬುಡಕಟ್ಟುಗಳ ಸಾಮಾಜಿಕ ದೃಷ್ಟಿಕೋನದಿಂದ ಕಟ್ಟೆಮನೆಗಳನ್ನು ಅಧ್ಯಯನ ಮಾಡುವುದು
2. ಬುಡಕಟ್ಟು ಜನರ ಕಟ್ಟಮನೆಗಳ ವ್ಯವಸ್ಥೆಯನ್ನು ಆಧುನಿಕ ನ್ಯಾಯಾಂಗ ವ್ಯವಸ್ಥೆಯ ಜೊತೆ ಸಮೀಕರಿಸಿ ತೌಲನಿಕ ಅಧ್ಯಯನ ಮಾಡುವುದು.
3. ಬುಡಕಟ್ಟುಗಳ ಬೆಡಗುಗಳ ತೌಲನಿಕ ಅಧ್ಯಯನ ಮಾಡುವ ಸಾಧ್ಯತೆ ಇದೆ.
4. ಬುಡಕಟ್ಟುಗಳ ವಿಧಿ-ನಿಷೇಧಗಳ ಬಗ್ಗೆ ತೌಲನಿಕ ಅಧ್ಯಯನ ಮಾಡುವ ಸಾಧ್ಯತೆ ಇದೆ. ವಿಧಿ-ನಿಷೇಧಗಳ ಹಿಂದಿನ ಕಾರಣಗಳ ಬಗ್ಗೆ ಅಧ್ಯಯನ ಮಾಡುವಷ್ಟು ಮಾಹಿತಿ ದೊರೆಯುವುದರಿಂದ ಈ ಅಧ್ಯಯನ ಕೈಗೊಳ್ಳಬಹುದು.
5. ಬುಡಕಟ್ಟುಗಳ ನಂಬಿಕೆಗಳ ಬಗ್ಗೆ ತೌಲನಿಕವಾಗಿ ಅಧ್ಯಯನ ಮಾಡುವುದು.
6. ಬುಡಕಟ್ಟು ಜನರ ಮರ ದೈವಗಳು ಮತ್ತು ಸಸ್ಯ ದೈವಗಳ ಬಗ್ಗೆ ಅಧ್ಯಯನ ಮಾಡುವ ಸಾಧ್ಯತೆ ಇದೆ.
7. ಕುಲ ಮತ್ತು ಬೆಡಗುಗಳ ಹುಟ್ಟಿನ ಬಗ್ಗೆ ರೋಚಕ ಕಥೆಗಳು ಸಮುದಾಯದ ಹಿರಿಯ ನಾಯಕರ ಬಾಯಲ್ಲಿವೆ ಇವುಗಳನ್ನು ದಾಖಲಿಸುವ ಅಗತ್ಯತೆಗಳು ಇವೆ ಇದರಿಂದ ಇದರ ಬಗ್ಗೆ ಪ್ರತ್ಯೇಕವಾದ ಅಧ್ಯಯಗಳು ನಡೆಯಬೇಕಾಗಿದೆ.
8. ಬುಡಕಟ್ಟು ಜನರ ಈರಗಾರರ ದೊಡ್ಡ ಪರಂಪರೆ ಇದೆ ಈರಗಾರರನ್ನು ಸಮಗ್ರ ಅಧ್ಯಯನ ವ್ಯಾಪ್ತಿಗೆ ಒಳಪಡಿಸಬಹುದು.

## ಪರಮಾರ್ಶನ ಗ್ರಂಥಗಳು


1. ಈಶ್ವರಪ್ಪ ಎಂ.ಜಿ : ೧೯೮೨. ಮ್ಯಾಸಬೇಡರು ಐ.ಬಿ.ಎಚ್ ಪ್ರಕಾಶನ. ಬೆಂಗಳೂರು
2. ಕರಿಶೆಟ್ಟಿ ರುದ್ರಪ್ಪ : ೧೯೯೫. ಮ್ಯಾಸನಾಯಕರು : ಒಂದು ಜನಾಂಗಿಕ ಅಧ್ಯಯನ ಕನ್ನಡ ಸಾಹಿತ್ಯ ಪರಿಷತ್ತು. ಬೆಂಗಳೂರು.
3. ಕೃಷ್ಣಮೂರ್ತಿ ಹನೂರು : ೧೯೮೭, ಜನಪದ ವೀರಗೀತೆಗಳು, ಕನ್ನಡ ಅಧ್ಯಯನ ಸಂಸ್ಥೆ ಮೈಸೂರು ವಿಶ್ವವಿದ್ಯಾಲಯ
4. ಪುಟ್ಟಣ್ಣ ಎಂ,ಎಸ್, :೧೯೨೪, ಚಿತ್ರದುರ್ಗದ ಪಾಳೆಗಾರರು ಮದಕರಿ ಪ್ರಕಾಶನ ಚಿತ್ರದುರ್ಗ.
5. ವಿರೂಪಾಕ್ಷಿ ಪೂಜಾರಿಹಳ್ಳಿ : ೧೯೯೯, ಗಾದ್ರಿಪಾಲನಾಯಕ , ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.
6. ತಾರಿಹಳ್ಳಿ ಹನುಮಂತಪ್ಪ ರವರ "ಕರ್ನಾಟಕದ ಉಗ್ರ ಆಚರಣೆಗಳು" ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ, (೨೦೧೭)
7. ಬೋರಲಿಂಗಯ್ಯ ಹಿ, ಚಿ, ರವರು 'ಬುಡಕಟ್ಟು ದೈವಾರಾಧನೆ' ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಯ, ಹಂಪಿ (೨೦೦೦)
8. ಬೋರಲಿಂಗಯ್ಯ ಹಿ, ಚಿ. ಮತ್ತು ಎ, ಎಸ್. ಪ್ರಭಾಕರ ರವರ ರಚಿಸಿದ "ಕರ್ನಾಟಕ ಬುಡಕಟ್ಟು ಸಚಿತ್ರ ಸಂಪುಟ" ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಯ, ಹಂಪಿ (೨೦೧೩).
9. ಮಂಜುನಾಥ ಬೇವಿನಕಟ್ಟಿ ರವರ 'ಕನ್ನಡ ಜನಪದ ನಂಬಿಕೆಗಳು' ಜ್ಯೋತಿ ಪ್ರಕಾಶನ ಮೈಸೂರು (೨೦೦೭)
10. ಮೈತ್ರಿ ಕೆ, ಎಂ, ರವರ 'ಬುಡಕಟ್ಟು ಕುಲಕಸುಬುಗಳು' ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಯ, ಹಂಪಿ (೨೦೦೨)